6. ವಾಣಿಜ್ಯ ಸಂಕೀರ್ಣ ಮತ್ತು ಇತರ ಮಳಿಗೆಗಳ ಯೋಜನೆ

ಇ) ಉದ್ಭವಿಸುವುದಿಲ್ಲ.

ಶಹರಿ ರೋಜಗಾರ ಯೋಜನೆಯಡಿ ಬಿಡುಗಡೆ ಮಾಡಿದ ಅನುದಾನ

328(353) - ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಹರಿ ರೋಜ್‌ಗಾರ್ ಯೋಜನೆಯಡಿಯಲ್ಲಿ ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆಗೆ ಕಳೆದ 2000-01, 2001-2002, 2002-03 ಸಾಲಿನಲ್ಲಿ ಬಿಡುಗಡೆ ಮಾಡಿದ ಹಣವೆಷ್ಟು?

ಆ) ಆ ಪೈಕಿ ಸಾಲ ಮಂಜೂರಾತಿ ಮಾಡದೆ ಉಳಿದ ಹಣವೆಷ್ಟು?

ಇ) ಸದರಿ ಯೋಜನೆಯಡಿ ಸಾಲ ಮಂಜೂರು ಮಾಡಿದ ಫಲಾನುಭವಿಗಳ ಸಂಪೂರ್ಣ ವಿವರ ನೀಡುವುದು.

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು):

ಅ) ಶಹರಿ ರೋಜಗಾರ್ ಯೋಜನೆಯಡಿಯಲ್ಲಿ ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆಗೆ: 2000-01 ನೇ ಸಾಲಿಗೆ ರೂ. 40.25 ಲಕ್ಷಗಳನ್ನು 2001-02 ಸಾಲಿಗೆ ರೂ. 26.16 ಲಕ್ಷಗಳನ್ನು 2002-03ನೇ ಸಾಲಿಗೆ 3.42 ಲಕ್ಷ ಬಿಡುಗಡೆ ಮಾಡಲಾಗಿದೆ.

ಆ) ಬಾಕಿ ಹಣ ಉಳಿದಿರುವುದಿಲ್ಲ.

ಇ) ಒಟ್ಟು 708 ಫಲಾನುಭವಿಗಳು. ಒಟ್ಟು ಸಹಾಯಧನ ರೂ. 38.21,889.00

ಹುಬ್ಬಳ್ಳಿ ಹೆಗ್ಗೇರಿಯಲ್ಲಿ ಹೊಸದಾಗಿ ಸಿಟಿ ಬಸ್ ನಿಲ್ದಾಣ ಪ್ರಾರಂಭ

329(356) - ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ಹೆಗ್ಗೇರಿಯಲ್ಲಿ ಹೊಸದಾಗಿ ಸಿಟಿ ಬಸ್ ನಿಲ್ದಾಣ ಪ್ರಾರಂಭಿಸುವ ವಿಚಾರ ಸರ್ಕಾರದ ಗಮನದಲ್ಲಿದೆಯೇ;

ಆ) ಇದ್ದಲ್ಲಿ ಯಾವ ವರ್ಷದಿಂದ ಸಿಟಿ ಬಸ್ ನಿಲ್ದಾಣ ಕಾರ್ಯರಂಭಗೊಳ್ಳುತ್ತದೆ.

ಶ್ರೀ ಬಿ ರಮಾನಾಥ್ ರೈ (ಸಾರಿಗೆ ಸಚಿವರು):

ಅ) ಇದೆ.

ಆ) ಹೆಗ್ಗೇರಿಯಲ್ಲಿ ನಗರ ಸಾರಿಗೆ ಬಸ್ ನಿಲ್ದಾಣ ನಿರ್ಮಿಸಲು ಉಚಿತವಾಗಿ ಜಮೀನು ನೀಡುವಂತೆ ಹುಬ್ಬಳ್ಳಿ - ಧಾರವಾಡ ನಗರ ಪಾಲಿಕೆಯನ್ನು ವಿನಂತಿಸಲಾಗಿದ್ದು, ಜಮೀನನ್ನು ಸಂಸ್ಥೆಯ ವಶಕ್ಕೆ ಪಡೆದುಕೊಂಡ ನಂತರ ಆಂತರಿಕ ಬಂಡವಾಳ ವೆಚ್ಚವನ್ನು ಗಮನದಲ್ಲಿಟ್ಟುಕೊಂಡು ನಿರ್ಮಾಣ ಕಾರ್ಯ ಪ್ರಾರಂಭಿಸಲಾಗುವುದು.

ಇ) ಉದ್ಭವಿಸುವುದಿಲ್ಲ.

ರಾಜ್ಯದ ಕಾರಾಗೃಹಗಳಿಂದ ಖೈದಿಗಳ ಪರಾರಿ

330(222) - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಬಂದಿಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಾರಾಗೃಹಗಳಿಂದ ಖೈದಿಗಳು ಪರಾರಿಯಾಗುತ್ತಿರುವ ಪ್ರಕರಣಗಳು ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಕಳೆದ 2 ವರ್ಷಗಳಲ್ಲಿ ಇಂತಹ ಎಷ್ಟು ಪ್ರಕರಣಗಳು ಸಂಭವಿಸಿದೆ. ಎಷ್ಟು ಜನ ಖೈದಿಗಳು ತಪ್ಪಿಸಿಕೊಂಡಿರುತ್ತಾರೆ ಮತ್ತು ಎಷ್ಟು ಖೈದಿಗಳನ್ನು ಮತ್ತೆ ಬಂಧಿಸಲಾಗಿದೆ. ಕಾರಾಗೃಹವಾರು ವಿವರ ನೀಡುವುದು.

ಇ) ಈ ರೀತಿ ಪ್ರಕರಣಗಳು ಹೆಚ್ಚಾಗುತ್ತಿರುವುದಕ್ಕೆ ಜೈಲಿನ ಕಟ್ಟಡಗಳು ಶಿಥಿಲವಾಗಿದ್ದು ಅವುಗಳ ದುರಸ್ತಿ ಇರುವುದರಿಂದ ಎಂಬುದು ನಿಜವೇ?

ಈ) ವಿಚಾರಣಾಧೀನ ಖೈದಿಗಳನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಹೋಗುವ ಸಿಬ್ಬಂದಿಗೆ ಆಧುನಿಕ ಆಯುಧ ನೀಡುವುದರಿಂದ ಇಂತಹ ಪ್ರಕರಣಗಳನ್ನು ತಡೆಯಲು ಸಾಧ್ಯವಿಲ್ಲವೇ?

ಉ) ಜೈಲುಗಳ ಆಧುನೀಕರಣಕ್ಕೆ ಸರ್ಕಾರ ಬಜೆಟ್‌ನಲ್ಲಿ ಮೀಸಲಿಟ್ಟಿರುವ ಹಣ ಎಷ್ಟು?

ಶ್ರೀ ರಾಜ ಅಮರೇಶ್ವರ ನಾಯಕ್ (ಬಂದೀಖಾನೆ ಸಚಿವರು):

ಅ) ಬಂದಿದೆ.

ಆ) 1. 1-1-2000 ರಿಂದ 31-12-2000 ವರೆಗೆ 36 ಬಂದಿಗಳು ಕಾರಾಗೃಹಗಳಿಂದ ಪರಾರಿಯಾಗಿರುತ್ತಾರೆ.

2. 1-1-2001 ರಿಂದ 31-12-2001 ರ ವರೆಗೆ 17 ಬಂದಿಗಳು ಕಾರಾಗೃಹಗಳಿಂದ ಪಾರಾಗಿಯಾಗಿರುತ್ತಾರೆ.

3. 1-1-2002 ರಿಂದ 8-7-2002 ರ ವರೆಗೆ 10 ಬಂದಿಗಳು ಕಾರಾಗೃಹಗಳಿಂದ ಪರಾರಿಯಾಗಿರುತ್ತಾರೆ.

ತಪ್ಪಿಸಿಕೊಂಡ 63 ಬಂದಿಗಳಲ್ಲಿ 18 ಬಂದಿಗಳನ್ನು ಮರು ಬಂದಿಸಲಾಗಿದೆ. ವಿವರ ಅನುಬಂಧ "ಅ" ದಲ್ಲಿ ನೀಡಲಾಗಿದೆ.

ಇ) ಇಲ್ಲ.

ಈ) ಸಾಧ್ಯವಿಲ್ಲ.

ಉ) ಕೇಂದ್ರ ಸರ್ಕಾರದಿಂದ ರೂ. 60.00 ಲಕ್ಷಗಳನ್ನು ಮೀಸಲಿಟ್ಟಿದೆ.